ಓ. ಎಸ್. ನಂಃ 52/2020

**ಡಿ.ಡಬ್ಲ್ಯೂಃ 1**

**ದಿನಾಂಕಃ 09-10-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಜಿ. ವಿ. ಕೆ. ವಕೀಲರಿಂದಃ**

ನನ್ನ ಮುತ್ತಜ್ಜ ಮುದಿಯಪ್ಪ ಎಂದರೆ ಸರಿ. ಅವರಿಗೆ ಹನುಮಪ್ಪ ಹಾಗೂ ಭರಮಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ವಾದಿಯರು ಭರಮಪ್ಪರವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುತ್ತಜ್ಜನ ಜೀವಿತಾವಧಿಯಲ್ಲಿ ಸದರಿ ಹನುಮಪ್ಪ ಹಾಗೂ ಭರಮಪ್ಪ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಹನುಮಪ್ಪ ಹಾಗೂ ಭರಮಪ್ಪ ರವರ ಜೀವಿತಾವಧಿಯಲ್ಲಿ ಅವರ ನಡುವೆ ಏನು ವ್ಯವಹಾರ ಆಗಿರುತ್ತದೆ ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 1ನೇ ಪ್ರತಿವಾದಿಯು ಸದರಿ ಹನುಮಪ್ಪ ಹಾಗೂ ಭರಮಪ್ಪ ರವರು ಅಸುಂಡಿಯಲ್ಲಿ ವಾಸವಾಗಿದ್ದರು, ಹನುಮಪ್ಪರವರು ಕುರಿ ಕಾಯುವ ಕೆಲಸ ಮಾಡುತ್ತಾ ವರಹ ಗ್ರಾಮಕ್ಕೆ ಬಂದು ನೆಲೆಸಿರುತ್ತಾರೆ. ಅವರಿಬ್ಬರು ವರಹ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಭರಮಪ್ಪರವರು ಅಸುಂಡಿ ಗ್ರಾಮದಲ್ಲಿಯೇ ವಾಸವಾಗಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಸಲಾಗಿದೆಯೇ ಎಂದರೆ ಇಲ್ಲ, ಸಾಕ್ಷಿದಾರರು ಮುಂದುವರೆದು ಭರಮಪ್ಪರವರಿಗೆ ಸೇರಿದ ಮನೆ ಹಾಗೂ ಜಮೀನುಗಳು ಅಸುಂಡಿ ಗ್ರಾಮದಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ಹನುಮಪ್ಪರವರೇ ಹಿರಿಯ ಮಗ ಎಂದರೆ ಸರಿ. ಅವರ ಕುಟುಂಬದ ಮ್ಯಾನೇಜರ್ ಆಗಿದ್ದರು ಎಂದರೆ ವರಹ ಗ್ರಾಮದ ಕುಟುಂಬದ ಮ್ಯಾನೇಜರ್ ಹನುಮಪ್ಪರವರಾಗಿದ್ದು, ಅಸುಂಡಿ ಗ್ರಾಮದ ಕುಟುಂಬದ ಮ್ಯಾನೇಜರ್ ಭರಮಪ್ಪ ಆಗಿದ್ದರು.

2. ಸರ್ವೇ ನಂಃ 118ರ ಮೂಲ ಕ್ಷೇತ್ರವು 21 ಎಕರೆ ಇತ್ತು. ಸದರಿ ಜಮೀನಿನ ಮೂಲ ಮಾಲೀಕರು ರಂಗನಾಥ ದೇಶಪಾಂಡೆ ಎಂದರೆ ಸರಿ. 1954 ರಲ್ಲಿ ನನ್ನ ಅಜ್ಜ ಹನುಮಂತಪ್ಪ ಸದರಿ 21 ಎಕರೆಯನ್ನು ಖರೀದಿಸಿದರು ಎಂದರೆ ಸರಿ. ಕುರಿ ಮಾರಿ ಖರೀದಿಸಿರುತ್ತಾರೆ. ಕುರಿ ಮಾರಿ ಖರೀದಿಸಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲಾಗಿದೆಯೇ ಎಂದರೆ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ಅಜ್ಜ ಹನುಮಂತಪ್ಪ ಸದರಿ 21 ಎಕರೆಯನ್ನು ಒಟ್ಟು ಕುಟುಂಬದ ಪರವಾಗಿ ಖರೀದಿಸಿದರು ಎಂದರೆ ಸರಿಯಲ್ಲ. ಸ್ವಂತವಾಗಿ ಖರೀದಿಸಿರುತ್ತಾರೆ. 1965 ರಲ್ಲಿ ಹನುಮಪ್ಪ ಹಾಗೂ ಭರಮಪ್ಪ ರವರು ತಮ್ಮ ಕುಟುಂಬದ ಅವ್ಯಕತೆಗಾಗಿ ಸದರಿ 21 ಎಕರೆ ಪೈಕಿ 10 ಎಕರೆ ಜಮೀನನ್ನು ಮಲ್ಲಪ್ಪ ಕೊಪ್ಪದ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಕೇವಲ ಹನುಮಪ್ಪ ರವರು ಮಾತ್ರ ಮಾರಾಟ ಮಾಡಿರುತ್ತಾರೆ. **ನಿಪಿ-17** ರ ಖರೀದಿ ಪತ್ರದಲ್ಲಿ ಹನುಮಪ್ಪ ಹಾಗೂ ಭರಮಪ್ಪ ಇಬ್ಬರ ಹೆಸರು ನಮೂದಾಗಿದೆ ಎಂದರೆ ಖರೀದಿದಾರರ ಹೇಳಿಕೆಯ ಮೇರೆಗೆ

ಓ. ಎಸ್. ನಂಃ 52/2020

**ಡಿ.ಡಬ್ಲ್ಯೂಃ 1**

ಇಬ್ಬರ ಹೆಸರನ್ನು ನಮುದು ಮಾಡಲಾಗಿರುತ್ತದೆ. ಉಳಿದ 11 ಎಕರೆ ಜಮೀನನ್ನು ಹನಮಪ್ಪ ಹಾಗೂ ಭರಮಪ್ಪ ಜಂಟೀ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ಹನಮಪ್ಪ ಒಬ್ಬರೇ ವಹಿವಾಟಿನಲ್ಲಿದ್ದರು. ಸದರಿ 11 ಎಕರೆ ಜಮೀನಿನಲ್ಲಿ ಹನಮಪ್ಪ ಹಾಗೂ ಭರಮಪ್ಪ ರವರಿಗೆ ಸಮನಾದ ಹಿಸ್ಸೆ ಹಕ್ಕು ಇದೆ ಎಂದರೆ ಸರಿಯಲ್ಲ.

3. ಭರಮಪ್ಪರವರು ಹಾಗೂ ವಾದಿಯರು ಅಸುಂಡಿ ಗ್ರಾಮದಲ್ಲಿ ಯಾವ ವರ್ಷದಿಂದ ವಾಸವಾಗಿದ್ದರು ಎನ್ನುವುದರ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ. ಹನಮಪ್ಪ ಹಾಗೂ ಭರಮಪ್ಪರವರು ಒಟ್ಟಿಗೆ ವರಹದಲ್ಲಿ ವಾಸವಾಗಿದ್ದ ಕಾರಣ ಜಂಟಿಯಾಗಿ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುತ್ತಜ್ಜನಿಗೆ ಸೇರಿದಂತೆ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿ. ದಾವಾ ಎ ತಪಶೀಲಿನ ಬಿ 1 ರ ರಿ.ಸ. ನಂಃ 118/2 ರ 1 ಎಕರೆ ಜಮೀನನ್ನು ಸದರಿ 11 ಎಕರೆ ಜಮೀನಿನ ಆದಾಯದಿಂದ ಖರೀದಿಸಲಾಗಿದೆ ಎಂದರೆ ನನ್ನ ಹೆಂಡತಿಯ ಒಡವೆಗಳನ್ನು ಮಾರಿ ಹಾಗೂ ಹಾಲಿನ ವ್ಯಾಪಾರದಿಂದ ಮತ್ತು ಲಾವಣಿಯಿಂದ ಬಂದಂತಹ ಆದಾಯದಿಂದ ಖರೀದಿಸಿರುತ್ತೇನೆ. ಈ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಸರಿ. ಖರೀದಿ ಪತ್ರದಲ್ಲಿ ಈ ಅಂಶಗಳನ್ನು ನಮೂದು ಮಾಡಿರುವುದಿಲ್ಲ. ಸದರಿ ಆಸ್ತಿಯಲ್ಲಿಯು ವಾದಿಯರಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಅಸುಂಡಿ ಗ್ರಾಮದಲ್ಲಿನ ಆಸ್ತಿಗಳನ್ನು ವಾದಿಗಳು ದುಡಿದು ಹಿಡಿದ ಆಸ್ತಿಗಳೆಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೆ. ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 09-10-2025

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್.ಸಿ,
ಹಿರೇಕೆರೂರು